'ಸ್ಪೆಷಲ್ ಮೈಸೂರ್ ಪಾಕ್'ಗೆ
ಇಂದೇ ಭೇಟಿ ಕೊಡಿ
ನ್ಯೂ ಬಾಂಬೆ ಟಿಫಾನಿಸ್
THE TASTE YOU LOVE THE NAME YOU TRUST
NEW BOMBAY TIFFANYS
ನಮ್ಮ ವಿಶೇಷಗಳು: ಹೊಸ ಹೊಸ ಬಗೆಯ ಬೆಂಗಾಲಿ ಸ್ವೀಟ್, ಮಿಲ್ಕ್ ಕೇಕ್, ಶುದ್ಧ ತುಪ್ಪದಿಂದ ತಯಾರಿಸಿದ ಸಿಹಿ ಮತ್ತು ಖಾರಾ ತಿಂಡಿಗಳು
1771/3 ವಿಕ್ಟೋರಿಯಾ ಕಾಂಪ್ಲೆಕ್ಸ್, ಸಯ್ಯಾಜಿರಾವ್ ರಸ್ತೆ, ಮೈಸೂರು
Contact: : ಮನೀಶ್ ಕುಮಾರ್.
ಮೊ: 9845111886, 4287475

ಆಂದೋಲನ
ದಿನಪತ್ರಿಕೆ
ಸಂಸ್ಥಾಪಕ ಸಂಪಾದಕ: ರಾಜಶೇಖರ ಕೋಟಿ

TATA MOTORS
PRERANA 26YRS
ಹೊಸ ಟಾಟಾ ಮ್ಯಾಜಿಕ್ ಎಕ್ಸ್‌ಪ್ರೆಸ್
8 ಆಸನಗಳ ಬಹುಉಪಯೋಗಿ ವಾಹನ
ಸಂಪೂರ್ಣ ಸ್ಟೀಲ್ ಬಾಡಿಯೊಂದಿಗೆ
ಬುಕ್ಕಿಂಗ್‌ಗಾಗಿ ಸಂಪರ್ಕಿಸಿ
ಪ್ರೇರಣಾ ಮೋಟಾರ್ಸ್ 9663368536

ಸಂಪುಟ: ೪೭, ಸಂಚಿಕೆ: ೧೩೩, ರಾಷ್ಟ್ರೀಯ ಶಕ ೧೯೩೯ ಶಿಶಿರ: ಪುಷ್ಯ ೨೩, ● ದ್ವಾದಶಿ– ಅನುರಾಧಾ, ಶನಿವಾರ, ಜ.೧೩, ೨೦೧೮, ದೂರವಾಣಿ: ೨೪೪೯೫೩೧, ೨೪೪೯೫೩೪, ೨೪೪೯೫೩೫, ಫ್ಯಾಕ್ಸ್: ೨೪೪೯೫೩೬, ಪುಟ : ೧೨, ರೂ. ೩

ಜನಮೆಚ್ಚಿದ ಇಂದಿರಾ ಕ್ಯಾಂಟೀನ್

- ಕಡಿಮೆ ಬೆಲೆಗೆ ಶುಚಿ-ರುಚಿ ಊಟ-ತಿಂಡಿ: ಶ್ರಮಿಕರ ಹರ್ಷ
- ಬೆಂಗಳೂರು ನಂತರ ಮೈಸೂರಿಗೆ ಯೋಜನೆ ವಿಸ್ತರಣೆ
- ಕಾಡಾ ಆವರಣದಲ್ಲಿನ ಕ್ಯಾಂಟೀನ್‌ಗೆ ಸಿಎಂ ಚಾಲನೆ

ಮೈಸೂರು,ಜ.೧೨– ಬಡವರು, ಶ್ರಮಿಕರು, ಅಸಂಘಟಿತ ಕಾರ್ಮಿಕರು ಹಸಿವಿನಿಂದ ನರಳಬಾರದು. ಅವರಿಗೆಲ್ಲಾ ರಿಯಾಯಿತಿ ದರದಲ್ಲಿ ಊಟ, ಉಪಾಹಾರ ಒದಗಿಸಬೇಕೆಂಬ ಸದುದ್ದೇಶದಿಂದ ರಾಜ್ಯ ಸರ್ಕಾರ ನಗರದಲ್ಲಿ ಆರಂಭಿಸಿರುವ ಇಂದಿರಾ ಕ್ಯಾಂಟೀನ್‌ಗಳ ಸರಣಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಬೆಳಿಗ್ಗೆ ಚಾಲನೆ ನೀಡಿದರು.

ಮೊದಲು ಬೆಂಗಳೂರಿನಲ್ಲಿ ಜಾರಿಗೊಳಿಸಿದ್ದ ಯೋಜನೆಯನ್ನು ಸಾಂಸ್ಕೃತಿಕ ನಗರಿ ಮೈಸೂರಿಗೂ ವಿಸ್ತರಿಸಲಾಗಿದೆ. ನಗರದಲ್ಲಿ ಒಟ್ಟು ೧೧ ಇಂದಿರಾ ಕ್ಯಾಂಟೀನ್ ನಿರ್ಮಿಸಲಾಗಿದ್ದು, ಕಾಡಾ ಕಚೇರಿ ಆವರಣದಲ್ಲಿರುವ ಕ್ಯಾಂಟೀನನ್ನು ಮುಖ್ಯಮಂತ್ರಿಗಳು ಉದ್ಘಾಟಿಸಿದರು. ಸಾರ್ವಜನಿಕರು, ಪಕ್ಷದ ಮುಖಂಡರೊಡನೆ ತಾವೂ ಚೌಚೌ ಬಾತ್ (ಕೇಸರಿಬಾತ್ ಮತ್ತು ಉಪ್ಪಿಟ್ಟು) ಸೇವಿಸಿದರು. ಬಳಿಕ ಮಳವಳ್ಳಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ತಡವಾಗುತ್ತದೆ ಎಂದು ಹೇಳಿ ಬೇಗನೇ ಹೊರಟುಬಿಟ್ಟರು. ಹಾಗಾಗಿ ವೇದಿಕೆ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಲಾಗಲಿಲ್ಲ.

ಬಹಳ ದಿನಗಳಿಂದ ನಿರೀಕ್ಷಿಸಲಾಗುತ್ತಿದ್ದ ಇಂದಿರಾ ಕ್ಯಾಂಟೀನ್ ನಗರದಲ್ಲಿ ಆರಂಭಗೊಂಡಿರುವುದಕ್ಕೆ ನಾಗರಿಕರು ಹರ್ಷ ವ್ಯಕ್ತಪಡಿಸಿದರು.

⏭ ೮

ಮೈಸೂರಿನ ಕಾಡಾ ಕಚೇರಿ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಇಂದಿರಾ ಕ್ಯಾಂಟೀನನ್ನು ಶುಕ್ರವಾರ ಬೆಳಗ್ಗೆ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉಪಾಹಾರ ಸೇವಿಸಿದರು. ಡಾ.ಎಚ್.ಸಿ.ಮಹದೇವಪ್ಪ, ಎಂ.ಕೆ.ಸೋಮಶೇಖರ್, ಡಾ.ಬಿ.ಪುಷ್ಪಾ ಅಮರನಾಥ್, ಮಂಜುಳ ಮಾನಸ, ಎಚ್.ಎ.ವೆಂಕಟೇಶ್, ಭಾಸ್ಕರ್ ಎಲ್. ಗೌಡ ಮತ್ತಿತರರು ಚಿತ್ರದಲ್ಲಿದ್ದಾರೆ.

ನ್ಯಾಯದಲ್ಲೇ ದುಗುಡ

- ಇತಿಹಾಸ ಸೃಷ್ಟಿಸಿದ 'ಸುಪ್ರೀಂ' ನ್ಯಾಯಮೂರ್ತಿಗಳ ಸುದ್ದಿಗೋಷ್ಠಿ!
- ಸಿಜೆಐ ಬಗ್ಗೆ ನಾಲ್ವರು ಹಿರಿಯ ನ್ಯಾಯಮೂರ್ತಿಗಳ ಅಸಮಾಧಾನ

ಹೊಸದಿಲ್ಲಿ,ಜ.೧೨– ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂರು ಅಂಗಗಳ ಪೈಕಿ ಒಂದಾದ ನ್ಯಾಯಾಂಗ ವ್ಯವಸ್ಥೆಯಲ್ಲಿ ಜನರು ಬಹಳವಾಗಿ ವಿಶ್ವಾಸವಿಟ್ಟಿದ್ದಾರೆ. ಆದರೆ, ಅದನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ನ್ಯಾಯಮೂರ್ತಿಗಳು, ನ್ಯಾಯಾಂಗದೊಳಗೆ ಒಂದು ವಿಧದ ಆತಂಕದ ವಾತಾವರಣ ಸೃಷ್ಟಿಯಾಗಿರಬಹುದೆಂಬ ಅನುಮಾನಾಸ್ಪದ ಬೆಳವಣಿಗೆ ರಾಜಧಾನಿಯಲ್ಲಿ ಶುಕ್ರವಾರ ನಡೆದಿದೆ.

ದೇಶದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಸರ್ವೋಚ್ಚ ನ್ಯಾಯಾಲಯದ ನಾಲ್ವರು ನ್ಯಾಯಮೂರ್ತಿಗಳು ಬಹಿರಂಗ ಸುದ್ದಿಗೋಷ್ಠಿ ನಡೆಸಿ, ಪ್ರಸ್ತುತ ದೇಶದ ನ್ಯಾಯಾಂಗ ವ್ಯವಸ್ಥೆ ಹಾಗೂ ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ಅವರ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ನ್ಯಾಯಾಲಯದ ಕೆಲಸ ಕಾರ್ಯಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿ, ನ್ಯಾಯಮೂರ್ತಿ ಜೆ.ಚಲಮೇಶ್ವರ್ ಅವರ ನೇತೃತ್ವದಲ್ಲಿ ಅವರದೇ ನಿವಾಸದ ಆವರಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯಮೂರ್ತಿಗಳಾದ ರಂಜನ್ ಗೊಗೋಯ್, ಮದನ್ ಲೋಕುರ್ ಹಾಗೂ ಕುರಿಯನ್ ಜೋಸೆಫ್ ಪಾಲ್ಗೊಂಡಿದ್ದರು.

ಸರ್ವೋಚ್ಚ ನ್ಯಾಯಾಲಯದಲ್ಲಿ ಎಲ್ಲವೂ ಸರಿಯಿಲ್ಲ. ಆಡಳಿತ ಅವ್ಯವಸ್ಥೆಯ ಗೂಡಾಗಿದೆ. ಬಲು ಸೂಕ್ಷ್ಮ ಪ್ರಕರಣಗಳ ವಿಚಾರಣೆಯನ್ನು ಕಿರಿಯ ನ್ಯಾಯಮೂರ್ತಿಗಳಿಗೆ ವಹಿಸಲಾಗುತ್ತಿದೆ. ಹಿರಿಯ ಹಾಗೂ ಅನುಭವಿ ನ್ಯಾಯಮೂರ್ತಿಗಳನ್ನು ಕಡೆಗಣಿಸಲಾಗುತ್ತಿದೆ. ನ್ಯಾಯಮೂರ್ತಿಗಳ ನೇಮಕದಲ್ಲಿಯೂ ಅರ್ಹತೆ ಇಲ್ಲದವರನ್ನೂ ಪರಿಗಣಿಸಲಾಗುತ್ತಿದೆ. ಇದರಿಂದಾಗಿ ದೇಶದ ಪ್ರಜಾಸತ್ತೆಗೆ ಅಪಾಯ ಎದುರಾಗಬಹುದು ಎಂದು ಕಳವಳ ವ್ಯಕ್ತಪಡಿಸಿದರು.

ಪ್ರಜಾತಂತ್ರ ವ್ಯವಸ್ಥೆಗೆ ಸ್ವತಂತ್ರ ನ್ಯಾಯಾಂಗದ ಅಗತ್ಯವಿದೆ. ಸರ್ವೋಚ್ಚ ನ್ಯಾಯಾಲಯದ ಮೂಲ ತತ್ವಗಳು ಪ್ರತಿ ನ್ಯಾಯಮೂರ್ತಿಗಳೂ ಸಮಾನವಾಗಿ ಮತ್ತು ಸ್ವತಂತ್ರರಾಗಿ ಪರಿಗಣಿಸಲ್ಪಡುತ್ತಾರೆ ಎನ್ನುತ್ತವೆ. ಆದರೆ, ಆ ಅಂಶಗಳು ಇತ್ತೀಚೆಗೆ ಕಾರ್ಯಗತವಾಗುತ್ತಿಲ್ಲ ಎಂದು ವಿಷಾದಿಸಿದರು.

ದೇಶದ ಮುಖ್ಯ ನ್ಯಾಯಮೂರ್ತಿಗಳ ಬಳಿ ನಮ್ಮ ಕಳವಳವನ್ನು ವ್ಯಕ್ತಪಡಿಸಿದಾಗ ಅವರು ಈ ಬಗ್ಗೆ ಸರಿಯಾಗಿ ಪ್ರತಿಕ್ರಿಯಿಸಲೇ ಇಲ್ಲ. ನಾವೂ ಕಳೆದ ಕೆಲವು ತಿಂಗಳುಗಳಿಂದ ಇದೇ ವಿಚಾರವಾಗಿ ನೊಂದಿದ್ದೇವೆ. ಇನ್ನೂ ಮೌನವಾಗಿದ್ದರೆ ದೇಶದ ಜನತೆ ನಮ್ಮನ್ನು ಮುಂದೊಮ್ಮೆ ಪ್ರಶ್ನಿಸಬಹುದು ಎಂಬ ಆತಂಕದಿಂದಲೇ ಸುದ್ದಿಗೋಷ್ಠಿ ನಡೆಸಲು ನಿರ್ಧರಿಸಿದೆವು ಎಂದು ಚಲಮೇಶ್ವರ್ ವಿವರಿಸಿದರು.

ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ಅವರ ವಿರುದ್ಧ ವಾಗ್ದಂಡನೆಗೆ ಮುಂದಾಗುವ ಆಲೋಚನೆ ತಮಗಿಲ್ಲ. ಅದನ್ನು ದೇಶದ ಜನರೇ ನಿರ್ಧರಿಸಬೇಕು ಎಂದು ನಾಲ್ವರೂ ಹಿರಿಯ ನ್ಯಾಯಮೂರ್ತಿಗಳು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ನಾವು ಈ ಎಲ್ಲ ಅವ್ಯವಸ್ಥೆಗಳನ್ನೂ ನೋಡಿಕೊಂಡು ಸುಮ್ಮನಿದ್ದೆವು ಎಂದು ನೀವು ಆಮೇಲೆ ದೂರಬಾರದೆಂಬ ಉದ್ದೇಶದಿಂದ ಈ ಗೋಷ್ಠಿ ನಡೆಸುವುದು ಅನಿವಾರ್ಯವಾಗಿದೆ ಎಂದು ನ್ಯಾಯಮೂರ್ತಿ ಚಲಮೇಶ್ವರ್ ಹೇಳಿದರು.

ನಮಗೆ ಅಸಮಾಧಾನವಾಗಿದೆ ಎಂದು ಮುಖ್ಯ ನ್ಯಾಯಮೂರ್ತಿ ಅವರಿಗೆ ಪತ್ರ ಬರೆದು ನಾಲ್ವರೂ ಸಹಿ ಹಾಕಿ ಕೊಟ್ಟಿದ್ದೇವೆ. ನಾವು ನಾಲ್ವರೂ ಹಲವಾರು ಬಾರಿ ಮುಖ್ಯ ನ್ಯಾಯಮೂರ್ತಿಗಳನ್ನು ಖುದ್ದಾಗಿ ಭೇಟಿ ಮಾಡಿದ್ದೇವೆ. ಇಂದೂ ಕೂಡ ಭೇಟಿ ಮಾಡಿದ್ದೆವು, ಆದರೆ ನಮ್ಮ ಪ್ರಯತ್ನಗಳೆಲ್ಲವೂ ವಿಫಲವಾಗಿವೆ ಎಂದರು.

೨೦ ವರ್ಷಗಳ ನಂತರವಾದರೂ ದೇಶದ ಜನತೆ ಈ ಬಗ್ಗೆ ಪ್ರಶ್ನಿಸಬಹುದು ಎಂಬ ಕಾರಣದಿಂದ ನಮಗೆ ಜನರ ಮುಂದೆ ಬರುವುದು ಬಿಟ್ಟರೆ ಬೇರೆ ಯಾವುದೇ ಆಯ್ಕೆಗಳು ಇರಲಿಲ್ಲ ಎಂದು ಚಲಮೇಶ್ವರ್ ವಿವರಿಸಿದರು.

⏭ ೫

ಹೊಸದಿಲ್ಲಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯಮೂರ್ತಿ ಜೆ.ಚಲಮೇಶ್ವರ್ ಅವರ ನಿವಾಸದ ಆವರಣದಲ್ಲಿ ಹಿರಿಯ ನ್ಯಾಯಮೂರ್ತಿಗಳಾದ ರಂಜನ್ ಗೊಗೋಯ್, ಮದನ್ ಲೋಕುರ್ ಹಾಗೂ ಕುರಿಯನ್ ಜೋಸೆಫ್ ಅವರು ಶುಕ್ರವಾರ ಜಂಟಿ ಸುದ್ದಿಗೋಷ್ಠಿ ನಡೆಸಿದರು.

ಪ್ರಧಾನಿ ಮಧ್ಯ ಪ್ರವೇಶಿಸಲಿ

ಸರ್ವೋಚ್ಚ ನ್ಯಾಯಾಲಯದ ಆಡಳಿತ ವ್ಯವಸ್ಥೆ ಹಾಗೂ ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ಅವರ ವಿರುದ್ಧ ನಾಲ್ವರು ನ್ಯಾಯಮೂರ್ತಿಗಳು ಸುದ್ದಿಗೋಷ್ಠಿ ನಡೆಸಿ ಆರೋಪ ಮಾಡಿರುವ ಪ್ರಕರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರವೇಶ ಮಾಡಬೇಕು. ಹಿರಿಯ ನ್ಯಾಯಮೂರ್ತಿಗಳು ದೇಶದ ಹಿತಾಸಕ್ತಿಗೆ ಸಂಬಂಧಿಸಿದ ವಿಚಾರಗಳನ್ನು ಮುಂದಿಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಧಾನಿ, ದೀಪಕ್ ಮಿಶ್ರಾ, ಸರ್ವೋಚ್ಚ ನ್ಯಾಯಾಲಯದ ಆಡಳಿತ ಒಟ್ಟಾಗಿ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕಿದೆ.

–ಸುಬ್ರಮಣಿಯನ್ ಸ್ವಾಮಿ
ಬಿಜೆಪಿ ಹಿರಿಯ ಮುಖಂಡರು

ಸುದ್ದಿಗೋಷ್ಠಿ ನಡೆಸಿದ್ದು ತಪ್ಪು

ನಾಲ್ವರು ನ್ಯಾಯಮೂರ್ತಿಗಳ ಆರೋಪ ನಿಜವೂ ಇರಬಹುದು. ಆದರೆ ನ್ಯಾಯಮೂರ್ತಿಗಳು ಮಾಧ್ಯಮದ ಮುಂದೆ ಬಂದಿದ್ದು ಮಾತ್ರ ತಪ್ಪು. ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಜನರಿಗೆ ನ್ಯಾಯಾಂಗದ ಮೇಲೆ ಅಪಾರ ನಂಬಿಕೆ ಇದೆ.

ಈ ಘಟನೆ ಆ ನಂಬಿಕೆಯನ್ನು ಅಲುಗಾಡಿಸುವಂತಿದೆ. ನ್ಯಾಯಮೂರ್ತಿಗಳು ಏನೇ ಸಮಸ್ಯೆ ಇದ್ದರೂ ನ್ಯಾಯಾಂಗದ ಮಿತಿಯೊಳಗೇ ಪರಿಹಾರ ಕಂಡುಕೊಳ್ಳಬೇಕಿತ್ತು.

–ನ್ಯಾ.ಸಂತೋಷ್ ಹೆಗ್ಡೆ,
ನಿವೃತ್ತ ಲೋಕಾಯುಕ್ತ

ಕಳಲೆಗೆ ಟಿಕೆಟ್: ಎಚ್‌ಸಿಎಂ ಬೆಂಬಲಿಗರ ಅಸಮಾಧಾನ

ನಂ.ಗೂಡು ಸಚಿವರ ಗೃಹ ಕಚೇರಿಯಲ್ಲಿ ಸಭೆ

ನಂಜನಗೂಡು,ಜ.೧೨– ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ನಂಜನಗೂಡು ಕ್ಷೇತ್ರದಲ್ಲಿ ಕಳಲೆ ಕೇಶವಮೂರ್ತಿ ಅವರಿಗೇ ಟಿಕೆಟ್ ಎಂಬುದನ್ನು ತಿಳಿದ ಬಳಿಕ ಸಚಿವ ಡಾ.ಎಚ್.ಸಿ. ಮಹದೇವಪ್ಪ ಬೆಂಬಲಿಗ ಕಾಂಗ್ರೆಸ್ಸಿಗರ ಗುಂಪು ನಗರದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ ಸಚಿವರ ಗೃಹ ಕಚೇರಿಯಲ್ಲಿ ಶುಕ್ರವಾರ ಸಭೆ ನಡೆಸಿ ಅಸಮಾಧಾನ ಹೊರಹಾಕಿದೆ.

ಪಟ್ಟಣದಲ್ಲಿ ಗುರುವಾರ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕಳೆದ ಉಪ ಚುನಾವಣೆಯಲ್ಲಿ ಭಾರೀ ಬಹುಮತದಿಂದ ಕಳಲೆ ಕೇಶವ ಮೂರ್ತಿಯನ್ನು ಗೆಲ್ಲಿಸಿದಿರಿ. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕಳಲೆಯನ್ನು ಇನ್ನೂ ಹೆಚ್ಚಿನ ಮತಗಳಿಂದ ಗೆಲ್ಲಿಸಿ ಆಶೀರ್ವದಿಸಿ ಎಂದು ಹೇಳಿದ್ದರು. ಆ ಮೂಲಕ ನಂಜನ ಗೂಡು ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ಯಾರೆಂಬುದನ್ನು ಖಚಿತಪಡಿಸಿದ್ದರು. ಇದರ ಬೆನ್ನಲ್ಲೇ ಡಾ.ಎಚ್‌ಸಿಎಂ ಬೆಂಬಲಿಗರು ಸಚಿವರ ಗೃಹ ಕಚೇರಿಯಲ್ಲಿಯೇ ಸಭೆ ನಡೆಸಿ ಅಸಮಾಧಾನ ಹೊರ ಹಾಕಿರುವುದು ಗಮನಾರ್ಹ ಬೆಳವಣಿಗೆ ಎನಿಸಿದೆ. ಕಳೆದ ಉಪ ಚುನಾವಣೆಯಲ್ಲಿ ಮಾಜಿ ಸಚಿವ ವಿ.ಶ್ರೀನಿವಾಸಪ್ರಸಾದ್ ಅವರ ವಿರುದ್ಧ ಸಚಿವ ಎಚ್.ಸಿ.ಮಹದೇವಪ್ಪ ಅವರ ಪುತ್ರ ಸುನಿಲ್ ಬೋಸ್ ಸ್ಪರ್ಧಿಸಬೇಕಿತ್ತು. ಆದರೆ ಬದಲಾದ ರಾಜಕೀಯ ಕಾರಣಗಳಿಂದಾಗಿ ಜಾ.ದಳದ ಕಳಲೆ ಕೇಶವಮೂರ್ತಿ ಅವರನ್ನು ಕಾಂಗ್ರೆಸ್‌ಗೆ ಕರೆತಂದು ಪಕ್ಷದ ವರಿಷ್ಠರು ಕಣಕ್ಕಿಳಿಸಿದ್ದರು.

⏭ ೮

ಜಿಲ್ಲೆಯಲ್ಲೇ ಸ್ಪರ್ಧಿಸಿ: ಎಚ್‌ಸಿಎಂಗೆ ಒತ್ತಾಯ

ಮೈಸೂರು: ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಜಿಲ್ಲೆಯ ಯಾವುದಾದರೊಂದು ಕ್ಷೇತ್ರದಲ್ಲಿ ಸ್ಪರ್ಧಿಸಬೇಕು. ಜಿಲ್ಲೆಯಿಂದ ಹೊರ ಹೋಗಬಾರದೆಂದು ದಲಿತ ಸಂಘರ್ಷ ಸಮಿತಿ ಮೈಸೂರು ವಿಭಾಗೀಯ ಸಮಿತಿ ಸಂಚಾಲಕರುಗಳಾದ ದೇವಗಳ್ಳಿ ಸೋಮಶೇಖರ್, ಬೆಲವತ್ತ ರಾಮಚಂದ್ರ ಮತ್ತು ವಿ.ಗಣೇಶ್ ಒತ್ತಾಯಿಸಿದ್ದಾರೆ.

ನಂಜನಗೂಡು ನಿಮ್ಮದೇ ತಾಲ್ಲೂಕು. ನಂಜನಗೂಡು, ತಿ.ನರಸೀಪುರ ಕ್ಷೇತ್ರದಲ್ಲಿ, ಅಥವಾ ಜಿಲ್ಲೆಯ ಬೇರಾವುದೇ ಕ್ಷೇತ್ರದಲ್ಲಿ ಸ್ಪರ್ಧಿಸಲೇಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಇಂದಿನಿಂದ ಸುತ್ತೂರು ಜಾತ್ರೆ

ಮೈಸೂರು: ಸುತ್ತೂರು ಜಾತ್ರಾ ಮಹೋತ್ಸವಕ್ಕೆ ಶನಿವಾರ ಚಾಲನೆ ದೊರೆಯಲಿದೆ. ಜ.೧೩ರಂದು ಬೆಳಿಗ್ಗೆ ೧೦.೩೦ಕ್ಕೆ ಸಾಂಸ್ಕೃತಿಕ ಮೇಳ, ಮಾಹಿತಿ ಕೇಂದ್ರ, ರಂಗೋಲಿ ಸ್ಪರ್ಧೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಜಲಸಂಪನ್ಮೂಲ ಸಚಿವ ಎಂ.ಬಿ. ಪಾಟೀಲ್, ಕೇಂದ್ರ ಸಚಿವ ಅನಂತ ಕುಮಾರ್, ಸಚಿವೆ ಉಮಾಶ್ರೀ, ಚಿತ್ರನಟರಾದ ಶಿವರಾಜ್ ಕುಮಾರ್, ತಾರಾ ಅನುರಾಧಾ ಭಾಗವಹಿಸಲಿದ್ದಾರೆ. ಅಂದು ಸಂಜೆ ೪ ಗಂಟೆಗೆ ವಸ್ತುಪ್ರದರ್ಶನ, ಕೃಷಿ ಮೇಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್, ಸಚಿವ ಆರ್.ವಿ.ದೇಶಪಾಂಡೆ, ಕೃಷ್ಣ ಭೈರೇಗೌಡ, ಕೋಲಾರ ಸಂಸದ ಕೆ.ಎಚ್.ಮುನಿಯಪ್ಪ ಪಾಲ್ಗೊಳ್ಳಲಿದ್ದಾರೆ.

ಕಾಂಗ್ರೆಸ್ ಸೇರ್ಪಡೆ ೧೯ಕ್ಕೆ: ಸಿಎಚ್‌ವಿ

ಮೈಸೂರು,ಜ.೧೨– ಕಾಂಗ್ರೆಸ್ ಪಕ್ಷವನ್ನು ಅಧಿಕೃತವಾಗಿ ಜ.೧೯ಕ್ಕೆ ಸೇರುತ್ತಿದ್ದು, ಅಂದು ಕೆಲವರ ಬಣ್ಣ ಬಯಲು ಮಾಡುತ್ತೇನೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ಎಚ್.ವಿಜಯಶಂಕರ್ ಅವರು ಬಿಜೆಪಿ ಮುಖಂಡರಿಗೆ ಪರೋಕ್ಷ ಎಚ್ಚರಿಕೆ ನೀಡಿದ್ದಾರೆ.

ಬೆಂಗಳೂರು ಕೆಪಿಸಿಸಿ ಕಚೇರಿಯಲ್ಲಿ ಕಾರ್ಯಕ್ರಮ

ರಾಮಕೃಷ್ಣ ನಗರದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸದಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ವಿಜಯಶಂಕರ್, ಜ.೧೯ರಂದು ಬೆಂಗಳೂರಿನಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಕೆಪಿಸಿಸಿ ಅಧ್ಯಕ್ಷರು, ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆ ಕಾರ್ಯಕ್ರಮ ನಡೆಯಲಿದೆ. ನನ್ನ ಹಲವು ಬೆಂಬಲಿಗರು ಕಾಂಗ್ರೆಸ್ ಸೇರಲಿದ್ದಾರೆ. ಈ ಬಗ್ಗೆ ಇಂದು ಮುಖ್ಯಮಂತ್ರಿಗಳ ಜತೆ ಮಾತುಕತೆ ನಡೆಸಿದ್ದೇನೆ ಎಂದರು.

ಮೂಲ ಮನೆಗೆ ಮರಳುತ್ತಿದ್ದೇನೆ. ವಿಶೇಷ ಪತ್ರಿಕಾಗೋಷ್ಠಿ ಕರೆದು ಎಲ್ಲ ವಿಷಯ ಬಹಿರಂಗಪಡಿಸುತ್ತೇನೆ. ಅಂದು ಕೆಲವರ ಮುಖವಾಡ ಕಳಚಿ ಬೀಳುತ್ತವೆ. ಯಾಕಾಗಿ ಪಕ್ಷ ಬಿಟ್ಟೆ ಎನ್ನುವುದನ್ನು ತಿಳಿಸುತ್ತೇನೆ ಎಂಬುದನ್ನೂ ಅಂದೇ ವಿವರಿಸುತ್ತೇನೆ ಎಂದರು.

ಉಪಗ್ರಹ ಉಡಾವಣೆ: ಇಸ್ರೊ ಶತಕ ಸಾಧನೆ

- ಶ್ರೀಹರಿಕೋಟಾ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ
- ಬಾಹ್ಯಾಕಾಶಕ್ಕೆ ಹಾರಿದ ಪಿಎಸ್‌ಎಲ್‌ವಿ ಸಿ–೪೦
- ೧೦೦ನೇ ಉಪಗ್ರಹ ಶುಕ್ರವಾರ ಯಶಸ್ವಿ ಉಡಾವಣೆ

ರಾಕೆಟ್ ಕಾರ್ಟೋಸ್ಯಾಟ್–೨ ಉಪಗ್ರಹ, ಸೂಕ್ಷ್ಮ ಉಪಗ್ರಹ, ನ್ಯಾನೊ ಉಪಗ್ರಹ, ೨೮ ವಿದೇಶಿ ನ್ಯಾನೊ ಉಪಗ್ರಹಗಳ ಸಾಗಣೆ

ಸ್ವರಾಮೃತ: ಆರಕ್ಷಕರಿಗೆ ಸಂಗೀತ ಗೌರವ

ಮೈಸೂರು,ಜ.೧೨– ಪೊಲೀಸರಿಲ್ಲದ ಸಮಾಜವನ್ನು ಊಹಿಸಿಕೊಳ್ಳುವುದು ಕಷ್ಟ. ಅಪರಾಧಿ ಜಗತ್ತನ್ನು ಸೂಕ್ಷ್ಮವಾಗಿ ಗಮನಿಸುತ್ತಾ, ಸಮಾಜದಲ್ಲಿ ಶಾಂತಿ ನೆಲೆಸುವಂತೆ ಮಾಡುವುದರಲ್ಲಿ ತಮ್ಮನ್ನು ತ್ರಿಕರಣಪೂರ್ವಕವಾಗಿ ತೊಡಗಿಸಿಕೊಂಡಿರುವ ಪೊಲೀಸರನ್ನು ನಾವು ಎಂದೂ, ಯಾವಾಗಲೂ ನೆನೆಯಲೇಬೇಕು.

- ರೋಟರಿ ಹೆರಿಟೇಜ್ ಮೈಸೂರು, ಸ್ವರಸಾಗರ ಮ್ಯೂಸಿಕ್ ಫೌಂಡೇಶನ್ ಆಯೋಜಿತ ಕಾರ್ಯಕ್ರಮ
- ಡಿಜಿಟಲ್ ಗ್ರಂಥಾಲಯವುಳ್ಳ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕೇಂದ್ರ ಸ್ಥಾಪನೆಯ ಸದುದ್ದೇಶ

ಆದರೆ, ಆರಕ್ಷಕರು ಸಮಾಜದಲ್ಲಿ ಗೌರವ, ಅಭಿನಂದನೆಗಳಿಂದ ವಂಚಿತರಾದವರು, ಸಾರ್ವಜನಿಕರು ಸ್ನೇಹಭಾವ ತೋರಿದ್ದು ತೀರಾ ಕಡಿಮೆಯೇ. ಆದರೆ, ಬಹುಶಃ ಮೊಟ್ಟ ಮೊದಲ ಬಾರಿಗೆ ಸಾಂಸ್ಕೃತಿಕ ನಗರಿಯಲ್ಲಿ 'ಆರಕ್ಷಕ'ರಿಗೆ ಸಂಗೀತದ ಮೂಲಕ ಗೌರವ ಸಮರ್ಪಿಸುವ ವಿಶಿಷ್ಟ ಕಾರ್ಯಕ್ರಮವನ್ನು ಸಂಘಟಿಸಲಾಗಿದೆ.

ರೋಟರಿ ಹೆರಿಟೇಜ್ ಮೈಸೂರು ವತಿಯಿಂದ ಸ್ವರ ಸಾಗರ ಮ್ಯೂಸಿಕ್ ಫೌಂಡೇಷನ್ ಸಹಯೋಗದಲ್ಲಿ ಜ. ೨೦ರಂದು ಸಂಜೆ ೪.೩೦ಕ್ಕೆ ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ 'ಸ್ವರಾಮೃತ–೩ ಆರಕ್ಷಕರಿಗೆ ನಮನ' ಎಂಬ ವರ್ಣರಂಜಿತ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

⏭ ೫



ದೇಣಿಗೆಯ ಪಾಸ್‌ನಲ್ಲಿ ಸಂಗ್ರಹವಾಗುವ ಹಣದಲ್ಲಿ ಖರ್ಚುವೆಚ್ಚವನ್ನು ಕಳೆದು ಶೇ.೭೫ರಷ್ಟು ಹಣವನ್ನು ಪೊಲೀಸ್ ಸಹಾಯನಿಧಿಗೆ ನೀಡಲಾಗುವುದು. ಶೇ.೨೫ರಷ್ಟು ಹಣವನ್ನು ರೋಟರಿಯ ದತ್ತಿ ಕಾರ್ಯಕ್ರಮಗಳಿಗೆ ಬಳಸಲಾಗುವುದು. ಶ್ರೇಯಾನಿಧಿಗೆ ಕೊಡುವ ಹಣಕ್ಕೆ ರೋಟರಿ ಫೌಂಡೇಷನ್‌ನ ಮೂಲಕ ಮ್ಯಾಚಿಂಗ್ ಗ್ರ್ಯಾಂಡ್ ಅನ್ನು ಪಡೆಯುವ ಪ್ರಯತ್ನ ಮಾಡಿ ಒಂದು ಡಿಜಿಟಲ್ ಲೈಬ್ರರಿ ಕೇಂದ್ರವುಳ್ಳ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರವನ್ನು ನಿರ್ಮಿಸಲಾಗುವುದು.

–ಕೆ.ಮಂಜುನಾಥ್, ಅಧ್ಯಕ್ಷರು, ರೋಟರಿ ಹೆರಿಟೇಜ್

ಮೈಸೂರಿನಲ್ಲಿ ೩.೫ ಸಾವಿರ ಪೊಲೀಸರಿದ್ದು, ಅವರ ಕುಟುಂಬದ ಸದಸ್ಯರು ಆಹ್ವಾನಿತರಾಗಿರುತ್ತಾರೆ. ಚಿತ್ರರಂಗದ ಖ್ಯಾತ ನಟರು ಆರಕ್ಷಕರಿಗೆ ಗೌರವ ಸಮರ್ಪಿಸಲು ಆಗಮಿಸುತ್ತಿದ್ದಾರೆ. ಸಂಗೀತ ಕಾರ್ಯಕ್ರಮದ ಸ್ಟಾರ್ಸ್ ಕೂಡ ಪೊಲೀಸರೆ.

–ಎಂ.ಪಿ.ಪ್ರಭಾಕರ್, ಕಾರ್ಯದರ್ಶಿ, ರೋಟರಿ ಹೆರಿಟೇಜ್

ಇಂದಿನಿಂದ ಭಾರತ-ದಕ್ಷಿಣ ಆಫ್ರಿಕಾ ೨ನೇ ಟೆಸ್ಟ್

⏭ ವರದಿ ಪುಟ ೧೦

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 402
ದೂರವಾಣಿ: 2425156

22 ಕ್ಯಾರೆಟ್ ಚಿನ್ನದ ದರ
ತೊಳಸಿ ಜ್ಯುವೆಲ್ಸ್
THOLASI JEWELS
₹2778
1 ಗ್ರಾಂಗೆ
ಹಿಂದಿನ ದಿನದ ದರ
ಅಶೋಕ ರೋಡ್, ಮೈಸೂರು
Ph: 2521926, 2441926